‘ಇವತ್ತು ನಿನ್ನ ಕೆಲಸದ ಆರ್ಡರ್ ಡಿಸ್‌ಪ್ಯಾಚ್ ಆಗುತ್ತೆ. ಅದು ನಿಂಗೆ ಸಿಕ್ಕ ಕೂಡಲೇ ಬಂದು ರಿಪೋರ್ಟ್ ಮಾಡಿಕೊ...’

ಪ್ರೊಫೆಸರ್ ಕಳಿಸಿದ್ದ ಎರಡೇ ವಾಕ್ಯಗಳ ಮೆಸೇಜ್ ನೋಡಿ ರಾಮಸ್ವಾಮಿಗೆ ಆದ ಸಂತೋಷ ಅಷ್ಟಿಷ್ಟಲ್ಲ. ಪಿಎಚ್ಡಿ ಮುಗಿಯೋವರೆಗೆ ಎಲ್ಲೂ ಕೆಲಸಕ್ಕೆ ಸೇರಿಕೊಳ್ಳಲ್ಲ ಅಂತ ಮಾತುಕೊಟ್ಟರೆ ನಿಂಗೆ ಗೈಡ್ ಮಾಡ್ತೀನಿ, ಪಿಎಚ್ಡಿ ಮುಗಿದ ಮೇಲೆ ನಿಂಗೆ ಕೆಲಸ ಕೊಡಿಸೊ ಜವಾಬ್ದಾರಿ ನಂದು ಅಂತ ರಿಜಿಸ್ಟ್ರೇಷನ್ ಮಾಡಿಸುವಾಗಲೇ ಪ್ರೊಫೆಸರ್ ಹೇಳಿದ್ದ ಮಾತು ನಿಜವಾಗುವ ಕಾಲ ಈಗ ಬಂತು. ದುಡ್ಡು, ಜಾತಿ, ರಾಜಕೀಯ ಬೆಂಬಲ ಈ ಮೂರೂ ಇಲ್ಲದವನಿಗೆ ಯೂನಿವರ್ಸಿಟಿಯಲ್ಲಿ ಲೆಕ್ಚರರ್ ಕೆಲಸ ಸಿಗುತ್ತೆಂದರೆ ಅದು ನಿಜಕ್ಕೂ ಪವಾಡ! ಹೆತ್ತವ್ವನಂತೆ ಕೈಹಿಡಿದು ನಡೆಸಿದ ಪ್ರೊಫೆಸರ್ ಇಲ್ಲದಿದ್ದರೆ ಒಂದು ಸಣ್ಣ ಕೆಲಸವೂ ಸಿಗುತ್ತಿರಲಿಲ್ಲ ಅನ್ನಿಸಿ ಭಾವುಕನಾದ.

ಅವ್ವ ಬದುಕಿದ್ದರೆ ಕೆಲಸ ಸಿಕ್ಕಿದ ಸುದ್ದಿ ಕೇಳಿದ ಕೂಡಲೇ ಮೊದಲು ನಿನ್ನ ಅಜ್ಜನಿಗೆ ನಮಸ್ಕಾರ ಮಾಡು. ಮೊದಲು ಒಂದು ಕೋಟು ಹೊಲಿಸಿಕೊ. ಅದನ್ನು ಹಾಕಿಕೊಂಡೇ ನೀನು ಕೆಲಸಕ್ಕೆ ಹೋಗಬೇಕು ಅನ್ನುತ್ತಿದ್ದಳೇನೊ. ಐದು ವರ್ಷ ಜೀವ ಹಿಡಿದುಕೊಂಡಿದ್ದರೆ ಅವ್ವ ಅದನ್ನೂ ನೋಡಬಹುದಿತ್ತು. ನಮ್ಮ ಕಷ್ಟಗಳು ಕೊನೆಯಾಗುವ ಹೊತ್ತಿಗೆ ಅವ್ವನೇ ಇಲ್ಲ ಅನ್ನಿಸಿ ಅವನಲ್ಲಿ ವಿಷಾದ ಭಾವ ಹುಟ್ಟಿತು. ಅವ್ವ ಆಡುತ್ತಿದ್ದ ಮಾತುಗಳೆಲ್ಲ ನೆನಪಾದವು. ತುಂಬಾ ಹೊತ್ತು ಅವ್ವನ ಮಾತುಗಳನ್ನು ನೆನಪು ಮಾಡಿಕೊಳ್ಳುತ್ತ ಕೂತೇ ಇದ್ದ. ಇವತ್ತು ನೀನು ಸ್ಕೂಲಿಗೆ ಹೋಗಬೇಕು ಅಂತ ಕೈಹಿಡಿದು ಎಳೆದುಕೊಂಡು ಹೋದ ಆ ದಿನ ನೆನಪಾಯಿತು. ನನ್ನ ಮಗ ಸ್ಕೂಲಿಗೆ ಹೋಗುತ್ತಾನೆ ಅಂತ ಸಂಭ್ರಮ ಅವ್ವನಿಗೆ. ನಾನು ಸ್ಕೂಲಿಗೆ ಹೋಗಲ್ಲ ಅಂತ ರಚ್ಚೆ ಹಿಡಿದಿದ್ದೆ. ಮನೆಯಿಂದ ಹೊರಕ್ಕೆ ಓಡಲು ಹೊಂಚು ಹಾಕುತ್ತಿದ್ದವನನ್ನು ಹಿಡಿದು ಬೆನ್ನಿಗೊಂದು ಏಟು ಕೊಟ್ಟು, ಗೋಡೆ ಮೇಲಿದ್ದ ಫೋಟೊ ಕಡೆ ತೋರಿಸುತ್ತ, ‘ನೋಡು ಇವರು ನಿನ್ನ ಅಜ್ಜ. ಓದಿ ದೊಡ್ಡ ಮನುಷ್ಯರಾದರು. ನೀನೂ ಸ್ಕೂಲಿಗೆ ಹೋಗಿ ಚೆನ್ನಾಗಿ ಓದಿದರೆ ಅವರಂತೇ ಆಗ್ತೀಯಾ, ಇಲ್ಲ ಅಂದ್ರೆ ಇಲ್ಲೇ ಇದ್ದು ಊರವರ ದನ ಕಾಯುತ್ತ ಬಿದ್ದಿರಬೇಕಾಗುತ್ತೆ...’ ಅಂತ ಗದರಿಸಿದ್ದಳು.

‘ನನ್ನ ಅಜ್ಜ ಅಂತೀಯಾ, ಒಂದು ದಿನವಾದ್ರೂ ನನ್ನನ್ನು ನೋಡೋಕೆ ಅವರು ಬಂದೇ ಇಲ್ಲ. ನೋಡು ಅವರು ಮಾತ್ರ ಎಷ್ಟು ಒಳ್ಳೆಯ ಬಟ್ಟೆ ಹಾಕ್ಕಂಡು ಫೋಟೊ ತೆಗೆಸಿಕೊಂಡಿದಾರೆ! ನಮಗೆ ಸರಿಯಾದ ಬಟ್ಟೆಗಳೇ ಇಲ್ಲ. ನೀನು ಸುಳ್ಳು ಹೇಳ್ತಿದ್ದೀಯಾ...’ ಅಂತ ಕೇಳಿ ಅವ್ವನ ಮುಖ ನೋಡಿದ್ದ.

‘ಈಗ ನೀನು ಸ್ಕೂಲಿಗೆ ಹೋಗಬೇಕು ರಾಮ. ಚೆನ್ನಾಗಿ ಓದಿದರೆ ದೊಡ್ಡವನಾದ ಮೇಲೆ ಒಳ್ಳೆಯ ಕೆಲ್ಸ ಸಿಗುತ್ತೆ. ಕೈತುಂಬಾ ಸಂಬಳ ಕೊಡ್ತಾರೆ. ಆಗ ಅಜ್ಜ ಹಾಕಿಕೊಂಡಿದ್ದಾರಲ್ಲ ಅಂತದೇ ಕೋಟು ಹೊಲಿಸಿಕೊಂಡು ಹಾಕಿಕೊಳ್ಳಬೌದು. ನಂಗೆ, ನಿನ್ನ ಅಪ್ಪ, ಅಣ್ಣನಿಗೆ ಒಳ್ಳೇ ಒಟ್ಟೆ ಕೊಡಿಸಬೌದು...’ ಅಂತ ಹೇಳುತ್ತ ಕೈಹಿಡಿದು ದರ ದರ ಎಳೆದುಕೊಂಡು ಬಂದು ಹೆಡ್ಮಾಸ್ಟರ್ ಮುಂದೆ ನಿಲ್ಲಿಸಿದ್ದಳು! ತಲೆ ಎತ್ತಿ ಹೆಡ್ಮಾಸ್ಟರ ಮುಖ ನೋಡಲೂ ರಾಮಸ್ವಾಮಿಗೆ ಭಯವಾಗಿ ಸುಮ್ಮನೆ ನೆಲ ನೋಡುತ್ತ ನಿಂತಿದ್ದ. ಮೊದಲು ಮೇಷ್ಟರ ಕಾಲಿಗೆ ನಮಸ್ಕಾರ ಮಾಡು ಅಂತ ಅವ್ವ ಗದರಿದ್ದಳು. ಹೆದರಿಕೊಂಡೇ ಬಗ್ಗಿ ಅವರ ಕಾಲು ಮುಟ್ಟಿ ನಮಸ್ಕಾರ ಮಾಡಿದ್ದ. ಆಮೇಲೆ ಒಬ್ಬನನ್ನೇ ಸ್ಕೂಲಲ್ಲಿ ಬಿಟ್ಟು ಮನೆಗೆ ಹೋಗಿದ್ದಳು. ಹೋಗುವಾಗ ಮೂರ್ನಾಲ್ಕು ಸಲ ತಿರುಗಿ ನೋಡಿದ್ದೂ ನೆನಪಾಯಿತು. ಗೋಡೆಯ ಮೇಲಿದ್ದ ಅಜ್ಜನ ಫೋಟೊ ತೋರಿಸಿ ನೀನೂ ಅವರಂತೆ ಓದಿ ದೊಡ್ಡವನಾಗಬೇಕು ಅಂತ ಅವ್ವ ಪದೇ ಪದೇ ಹೇಳುತ್ತಿದ್ದುದೇಕೆ ಎನ್ನುವುದು ಅವನಿಗೆ ಹೈಸ್ಕೂಲಿಗೆ ಬರುವವರೆಗೆ ಅರ್ಥ ಆಗಿರಲಿಲ್ಲ.

ಒಂದು ದಿನ ಸ್ಕೂಲಿನ ಆಫೀಸು ರೂಮಿನಲ್ಲಿ ಹೆಡ್ಮಾಸ್ಟರು ಕೂರುತ್ತಿದ್ದ ಕುರ್ಚಿಯ ಹಿಂದಿನ ಗೋಡೆ ಮೇಲೆ ಅಜ್ಜನ ಫೋಟೊ ನೋಡಿ ಅವನಿಗೆ ಆಶ್ಚರ್ಯವಾಗಿತ್ತು. ಅವ್ವನಿಗೆ ಹೇಳಬೇಕು ಅಂತ